ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಮಹಿಳಾ ಕಾಲೇಜು

ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತ ಮತ್ತು ನ್ಯಾಕ್ ನಿಂದ 'ಬಿ' ಮಾನ್ಯತೆ ಪಡೆದಿದೆ

**ಕೊಳ್ಳೇಗಾಲ – 571 440, ಚಾಮರಾಜನಗರ ಜಿಲ್ಲೆ**

☎: 08224-252149 🖷: 08224-256051 Email: jsscwk@gmail.com www.jsscwkgl.org

**ಪ್ರಕಟಣೆಯ ಕೃಪೆಗಾಗಿ**

## ಜೆಎಸ್‌ಎಸ್ ಮಹಿಳಾ ಕಾಲೇಜಿನ ವತಿಯಿಂದ ರಾಷ್ಟ್ರೀಯ ಸೇವಾ ಯೋಜನೆ ಶಿಬಿರ

ಕೊಳ್ಳೇಗಾಲ: 11.3.2019 ಇಲ್ಲಿನ ಜೆಎಸ್‌ಎಸ್ ಮಹಿಳಾ ಕಾಲೇಜಿನ ವತಿಯಿಂದ 2018-19ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರವನ್ನು ಮಾರ್ಚ್ 12 ರಿಂದ 20ರವರೆಗೆ ಹನೂರು ತಾಲ್ಲೋಕಿನ ಕಾಮಗೆರೆ ಗ್ರಾಮದಲ್ಲಿರುವ ಸಂತ ಮಾರ್ಗರೇಟ್ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಆಯೋಜಿಸಲಾಗಿದೆ.

ಮಾ 12 ರಂದು ಬೆಳಗ್ಗೆ 10.30ಕ್ಕೆ ರೆ.ಫಾ ಎಸ್.ಡಿ.ಜೋಸೆಫ್, ಸಂಸ್ಥಾಪಕರು, ಸಂತ ಮಾರ್ಗರೇಟ್ ಬಾಲಕಿಯರ ಪದವಿ ಪೂರ್ವ ಕಾಲೇಜು, ಕಾಮಗರೆ ಇವರು ಚಾಲನೆ ನೀಡಲಿದ್ದಾರೆ. ಪ್ರಾಚಾರ್ಯ ಪ್ರೊ.ಉಮೇಶ ಅಧ್ಯಕ್ಷತೆ ವಹಿಸಲಿದ್ದಾರೆ.

ಮಾ 13 ರಂದು ಬೆಳಗ್ಗೆ 10.00ಕ್ಕೆ ರೋಟರಿ ಸಂಸ್ಥೆ ಮತ್ತು ತಾಲ್ಲೋಖು ಅರಣ್ಯ ಇಲಾಖೆ ಸಹಯೋಗದಲ್ಲಿ ಗಿಡ ನೆಡುವ ಕಾರ್ಯಕ್ರಮ ನಡೆಯಲಿದೆ. ಸಂಜೆ 4.00ಕ್ಕೆ ಹನೂರಿನ ಸ.ಪ್ರ.ದ.ಕಾಲೇಜಿನ ಪ್ರಾಚಾರ್ಯ ಪ್ರೊ.ಎಸ್ ಸುಂದರಮೂರ್ತಿ ಇವರು **"ಪರಿಸರ ಸಂರಕ್ಷಣೆ ಅತ್ಯವಶ್ಯಕ"** ಎಂಬ ವಿಷಯದ ಮೇಲೆ ವಿಶೇಷ ಉಪನ್ಯಾಸ ನೀಡಲಿದ್ದಾರೆ.

ಮಾ 14 ರಂದು ಬೆಳಗ್ಗೆ 10.00ಕ್ಕೆ ಪ್ಲಾಸ್ಟಿಕ್ ನಿರ್ಮೂಲನೆ ಕುರಿತು ಜಾಗೃತಿ ಜಾಥಾ ಕಾರ್ಯಕ್ರಮ ನಡೆಯಲಿದೆ. ಸಂಜೆ 5.00 ಕ್ಕೆ ಶ್ರೀ ಎಂ ಅರುಣಕುಮಾರ್, ಗಾಯಕರು ಹಾಗೂ ಅಧ್ಯಕ್ಷರು, ಕರ್ನಾಟಕ ಸುಗಮ ಸಂಗೀತ ಪರಿಷತ್, ಚಾಮರಾಜನಗರ ಇವರು ಸಂಗೀತ ಸಂಜೆ ಕಾರ್ಯಕ್ರಮ ನಡೆಸಿಕೊಡುವರು.

ಮಾ 15 ರಂದು ಬೆಳಗ್ಗೆ 10.00 ಕ್ಕೆ ಸರ್ಕಾರಿ ಆಸ್ಪತ್ರೆ ಆವರಣದಲ್ಲಿ ಶಿಬಿರಾರ್ಥಿಗಳು ಶ್ರಮದಾನ ನೀಡಲಿದ್ದಾರೆ. ಸಂಜೆ 4.00 ಕ್ಕೆ **'ಮಹಿಳೆ ಮತ್ತು ಕಾನೂನು'** ಎಂಬ ವಿಷಯದ ಮೇಲೆ ಶ್ರೀ ಡಿ.ಎಸ್ ಬಸವರಾಜು, ಅಧ್ಯಕ್ಷರು ವಕೀಲ ಸಂಘ, ಕೊಳ್ಳೇಗಾಲ ಹಾಗೂ ವಚನ ಸಾಹಿತ್ಯ ಎಂಬ ವಿಷಯದ ಮೇಲೆ ಶ್ರೀ ಬಿ.ದೊರೆಸಾಮಿ ಮದ್ದೂರು, ಸಾಹಿತಿಗಳು, ವಿಶೇಷ ಉಪನ್ಯಾಸ ನೀಡಲಿದ್ದಾರೆ.

ಮಾ 16 ರಂದು ಬೆಳಗ್ಗೆ 10.00 ಕ್ಕೆ ದೇವಸ್ಥಾನದ ಆವರಣದಲ್ಲಿ ಶಿಬಿರಾರ್ಥಿಗಳಿಂದ ಶ್ರಮದಾನ ನಡೆಯಲಿದೆ. ಸಂಜೆ 4.00ಕ್ಕೆ **'ಹೆಚ್‌ಐವಿ & ಏಡ್ಸ್'** ಕುರಿತು ಶ್ರೀ ಎಸ್ ಎಸ್ ಶಶಿಕಾಂತ, ಆಪ್ತ ಸಮಾಲೋಚಕರು, ಸಾರ್ವಜನಿಕ ಸರ್ಕಾರಿ ಆಸ್ಪತೆ, ಕೊಳ್ಳೇಗಾಲ ಇವರು ವಿಶೇಷ ಉಪನ್ಯಾಸ ನೀಡಲಿದ್ದಾರೆ.

ಮಾ 17 ರಂದು ಬೆಳಗ್ಗೆ 10.30ಕ್ಕೆ ಶಿಬಿರಾರ್ಥಿಗಳಿಂದ **"ಕಡ್ಡಾಯ ಮತದಾನ ಜಾಗೃತಿ ಜಾಥಾ"** ಕಾರ್ಯಕ್ರಮ ನಡೆಯಲಿದೆ. ಸಂಜೆ 4.00ಕ್ಕೆ **"ಬುಡಕಟ್ಟು ಸಮುದಾಯದ ಸ್ವಾವಲಂಬಿ ಬದುಕು"** ಎಂಬ ವಿಷಯದ ಮೇಲೆ ಪ್ರೊ.ಕೇಶವನ್ ಪ್ರಸಾದ್ ಕೆ, ಮರಟ್ಟಿ, ಪ್ರಾಧ್ಯಾಪಕರು, ದೇಶಿ ಸಂಸ್ಕೃತಿ ಅಧ್ಯಯನ ಕೇಂದ್ರ ಕುರುಬನಕಟ್ಟೆ ಇವರಿಂದ ವಿಶೇಷ ಉಪನ್ಯಾಸ.

ಮಾ 18 ರಂದು ಬೆಳಗ್ಗೆ 12.00ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ಪ್ರೊ.ಎಂ.ಪಿ ನಟರಾಜು, ನಿವೃತ್ತ ಪ್ರಾಂಶುಪಾಲರು, ಸಮಾರೋಪ ಭಾಷಣ ಮಾಡಲಿದ್ದಾರೆ. ಶ್ರೀ ಮನೋರಕ್ಷಿತ ಬಂತೇಜಿ, ನಿವೃತ್ತ ಪ್ರಾಂಶುಪಾಲರು, ಶ್ರೀಮತಿ ಪ್ರೇಮಲತಾ ಕೃಷ್ಣಸ್ವಾಮಿ, ಅಧ್ಯಕ್ಷರು, ರೋಟರಿ ಸಂಸ್ಥೆ, ಶ್ರೀ ಎನ್ ನಂಜುಂಡಸ್ವಾಮಿ, ಪ್ರಾಂಶುಪಾಲರು, ಸಂತ ಮಾರ್ಗರೇಟ್ ಬಾಲಕಿಯರ ಪದವಿ ಪೂರ್ವ ಕಾಲೇಜು, ಕಾಮಗೆರೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.